**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ರೋಣ**

ಸಿ.ಸಿ. ನಂ. 2528/2021

ಸಿ.ಡಬ್ಲೂ: 6 ಪಿ.ಡಬ್ಲೂ: 3

ಹೆಸರುಃ ವೀರನಗೌಡ

ತಂದೆಯ ಹೆಸರುಃ ದೊಡ್ಡನಗೌಡ ಪಾಟೀಲ್

ವಯಸ್ಸುಃ 39 ವರ್ಷ

ಉದ್ಯೋಗಃ ಪೊಲೀಸ್ ಮುಖ್ಯಪೇದೆ ಲಕ್ಷ್ಮೇಶ್ವರ ಪೊಲೀಸ್ ಠಾಣೆ

ವಿಳಾಸಃ ಲಕ್ಷ್ಮೇಶ್ವರ

**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 17/02/2025 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ -ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದಃ**

**1.** ದಿನಾಂಕ 01/03/2021 ರಂದು ನಾನು ಠಾಣೆಯಲ್ಲಿ ಇದ್ದಾಗ ಚಾಸಾ-14 ಪಿ ಎಸ್ ಐ ಗುರುಶಾಂತ ದಾಶ್ಯಾಳ ರವರು ನನಗೆ ಮತ್ತು ಚಾಸಾ-1 ಬಿ ಎಚ್ ಕಾತ್ರಾಳ ಇವರಿಗೆ ಗ್ರಾಮ ಪೆಟ್ರೋಲಿಂಗ್ ಕೆಲಸಕ್ಕಾಗಿ ನಾಗರಸಿಕೊಪ್ಪ, ಬೆಣಚಮಟ್ಟಿ ಮತ್ತು ನಾಗರಸಿಕೊಪ್ಪ ತಾಂಡಾ ಗ್ರಾಮಗಳಿಗೆ ನೇಮಿಸಿದ ಪ್ರಕಾರ ನಾನು ಮತತು ಚಾಸಾ-1 ನಮ್ಮ ಬೈಕ್ ನಲ್ಲಿ ಬೆಃ 9-00 ಗಂಟೆಗೆ ಠಾಣೆ ಬಿಟ್ಟು 9-30 ಕ್ಕೆ ಬೆಣಚಮಟ್ಟಿಗೆ ಹೋದೆವು. ಬೆಣಚಮಟ್ಟಿಯಿಂದ ನಾಗರಸಿಕೊಪ್ಪ ತಾಂಡಾದ ಕಡೆಗೆ ಹೋಗುತ್ತಿದ್ದಾಗ ನಾಗರಸಿಕೊಪ್ಪ ತಾಂಡಾದಿಂದ ಮರಳು ತುಂಬಿದ ಒಂದು ಟ್ರ್ಯಾಕ್ಟರ ಎದುರುಗಡೆಯಿಂದ ಬಂದಿದ್ದು, ಅದನ್ನು ನಿಲ್ಲಿಸಿ ಡ್ರೈವರ್ ಹೆಸರು ಕೇಳಲಾಗಿ ಪರಶುರಾಮ ರಾಠೋಡ ಎಂದು ಹೇಳಿದ್ದು, ನಾವು ಕೂಡಲೇ ಚಾಸಾ-14 ಇವರಿಗೆ ಸದರಿ ವಿಷಯವನ್ನು ತಿಳಿಸಿದೆವು. ಚಾಸಾ-14 ರವರು ನಾನು ಬರುವವರೆಗೆ ಗಾಡಿಯಲ್ಲಿ ನಿಲ್ಲಿಸಿ ಡ್ರೈವರ್ ಗೆ ಕಳುಹಿಸಿಕೊಡುತ್ತೇನೆ ಎಂದು ಹೇಳಿದರು. ಅಷ್ಟರಲ್ಲಿ ಇಬ್ಬರು ವ್ಯಕ್ತಿಗಳು ಅಲ್ಲಿಗೆ ಬಂದರು. ಅವರ ಹೆಸರು ಅರ್ಜುನ, ಶಿವಪ್ಪ ರಾಠೋಡ ಎಂದು ತಿಳಿಸಿದರು. ಅರ್ಜುನ, ಶಿವಪ್ಪ , ಪರಸಪ್ಪ ಎಲ್ಲರೂ ಸೇರಿ ಮರಳು ತುಂಬಿಕೊಂಡು ಹೋದರೆ ಏನಾಗುತ್ತದೆ, ನೀವು ಗಾಡಿಯನ್ನು ಬಿಡದೇ ಇದ್ದರೇ ನಿಮ್ಮ ಮೇಲೆ ಗಾಡಿಯನ್ನು ಹಾಯಿಸಿ ಹೋಗುತ್ತೇವೆ ಎಂದು ಹೇಳುತ್ತಾ, ಪರಸಪ್ಪ ನೀನು ಗಾಡಿಯನ್ನು ತೆಗೆದುಕೊಂಡು ಹೋಗು, ಮುಂದೆ ಬಂದಿರುವುದನ್ನು ನಾನು ನೋಡಿಕೊಳ್ಳುತ್ತೇನೆ ಎಂದು ಅರ್ಜುನ ರಾಠೋಡ ಹೇಳಿದ.

2. ಚಾಸಾ-14 ರವರು ಜೀಪ್ ಡ್ರೈವರ್ ಜೊತೆ ಹೋಮಗಾರ್ಡ ಪ್ರಕಾಶ ಅಂಬೋರೆ ರವರನ್ನು ಕಳುಹಿಸಿಕೊಟ್ಟಿರುತ್ತಾರೆ. ಅವರು 10-15 ಕ್ಕೆ ಬರುತ್ತಾರೆ. ಆಗ ಅಲ್ಲಿ ಅರ್ಜುನ ಮತ್ತು ಶಿವಪ್ಪ ರಾಠೋಡ ಪ್ರಕಾಶ ಅಂಬೋರೆ ಇವರ ಜೊತೆ ಜಗಳ ಮಾಡುತ್ತಾ ಆತನನ್ನು ನೂಕಾಡುತ್ತಾ, ಎಳೆದಾಡುತ್ತಾ ಪರಸಪ್ಪ ಟ್ರ್ಯಾಕ್ಟರ ತೆಗೆದುಕೊಂಡು ಹೋಗುತ್ತಾನೆ. ಸದರಿ ಟ್ರ್ಯಾಕ್ಟರಗೆ ಗಾಡಿ ನಂಬರ ಇರುವುದಿಲ್ಲ. ಅದು ಮಹೇಂದ್ರ ಕಂಪನಿಯ ಟ್ರ್ಯಾಕ್ಟರ ಕೆಂಪು ಬಣ್ಣದ ಟ್ರ್ಯಾಕ್ಟರ ಆಗಿರುತ್ತದೆ. ಪರಶುರಾಮ ರಾಠೋಡ ಆ ವಾಹನವನ್ನು ತೆಗೆದುಕೊಂಡು ಹೋಗುತ್ತಾನೆ. ಟ್ರೇಲರ್ ಗೂ ಸಹ ನಂಬರ ಇರುವುದಿಲ್ಲ, ಅದರ ನಂಬರ ಸಹ ನನಗೆ ಈಗ ನೆನಪಿರುವುದಿಲ್ಲ. ಸದರಿ ಟ್ರ್ಯಾಕ್ಟರನಲ್ಲಿ 1 ಟ್ರೇಲರ್ ಬಾಡಿ ಲೇವಲ್ ನಷ್ಟು ಮರಳು ತುಂಬಿರುತ್ತದೆ. ಆಗ ಅರ್ಜುನ ಮತ್ತು ಶಿವಪ್ಪ ರಾಠೋಡ ಜಗಳ ಮಾಡುತ್ತಾ ಅವರು ಹೋಗಿಬಿಡುತ್ತಾರೆ. ನಂತರ ಠಾಣೆಗೆ ಬಂದು ವಿಷಯವನ್ನುಚಾಸಾ-14 ರವರಿಗೆ ತಿಳಿಸುತ್ತೇವೆ. ಚಾಸಾ-1 ರವರು ದೂರನ್ನು ಕೊಡುತ್ತಾರೆ. ದೂರನ್ನು ಠಾಣೆಯಲ್ಲಿ ಟೈಪ್ ಮಾಡಿಸುತ್ತಾರೆ. ಎಫ್ ಐ ಆರ್ ರಜಿಸ್ಟರ ಆದ ನಂತರ ಅದೇ ದಿನ ಚಾಸಾ-14 ರವರು ನನ್ನ ಹೇಳಿಕೆಯನ್ನು ಠಾಣೆಯಲ್ಲಿಯೇ ತೆಗೆದುಕೊಳ್ಳುತ್ತಾರೆ. ಆರೋಪಿತರನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

**ಪಾಟೀ ಸವಾಲು ಆರೋಪಿತರ ಪರ ಶ್ರೀ MHK ವಕೀಲರಿಂದಃ**

ಬೆಳಿಗ್ಗೆ 10-30 ಕ್ಕೆ ಘಟನೆಯಾಗಿದೆ 11-30 ಕ್ಕೆ ದೂರು ದಾಖಲಾಗಿರುತ್ತದೆ. ದೂರನ್ನು ಚಾಸಾ-1 ರವರು ಕೊಟ್ಟಿರುತ್ತಾರೆ. ಆ ಸಮಯದಲ್ಲಿ ನಾನು ಇದ್ದೆ. ದೂರನ್ನು ಚಾಸಾ-14 ರವರು ದಾಖಲು ಮಾಡಿದರು. ಇಷ್ಟು ಗಂಟೆಗೆ ದೂರು ಸ್ವಿಕಾರ ಆಗುತ್ತದ ಎಂದು ಅದಕ್ಕೆ ಸಹಿ ಮಾಡುತ್ತಾರೆ ಎಂದರೆ ನಿಜ. ದೂರನ್ನು ಚಾಸಾ-14 ರವರು ಎಷ್ಟು ಗಂಟೆಗೆ ಸ್ವಿಕಾರ ಮಾಡಿದರು ಎಂದು ನಾನು ನೋಡಲಿಲ್ಲ. ಸಮಯ ನನಗೆ ನೆನಪಿಲ್ಲ. ಬೆಳಿಗ್ಗೆ 11-00 ಗಂಟೆಗೆ ದೂರು ಕೊಟ್ಟೆವು. ನಾನು ದೂರನ್ನು ಠಾಣೆಯಲ್ಲಿಯೇ 11-00 ಗಂಟೆಗೆ ಟೈಪ್ ಮಾಡಿಸಿದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮಗೆ ಆ ದಿನ ಗ್ರಾಮ ಪೆಟ್ರೋಲಿಂಗ್ ಡ್ಯೂಟಿ ಹಾಕಿದ್ದರು. ಆ ದಿನದ ಬೀಟ್ ನಂಬರ ನನಗೆ ನೆನಪಿಲ್ಲ. 5 ವರ್ಷ ನಾನು ಗಜೇಂದ್ರಗಡ ಪೊಲೀಸ್ ಠಾಣೆಯಲ್ಲಿ ನೌಕರಿ ಮಾಡಿರುತ್ತೇನೆ. ನಾನು ಗಜೇಂದ್ರಗಡ ಪೊಲೀಸ್ ಠಾಣೆಯಿಂದ ಗೌಡಗೇರಿ, ಬೆಣಚಮಟ್ಟಿ ಮಾರ್ಗವಾಗಿ 10 ನಿಮಿಷದಲ್ಲಿ ನಾಗರಸಿಕೊಪ್ಪ ತಾಂಡಾ ಮುಟ್ಟಿದೆ. ಘಟನಾ ಸ್ಥಳದಿಂದ ನಮ್ಮ ಪೊಲೀಸ್ ಠಾಣೆ 6 ಕೀ ಮೀಟರ ದೂರ ಇದೆ. ಠಾಣೆಯಿಂದ ಘಟನಾ ಸ್ಥಳಕ್ಕೆ ಬೈಕ್ ನಲ್ಲಿ ಹೋದರೆ ಅರ್ಧ ಗಂಟೆ ಬೇಕು

ಎಂದರೆ ಸರಿಯಲ್ಲ. ನಾನು ನನ್ನ ಹೇಳಿಕೆಯಲ್ಲಿ ಟ್ಯಾಕ್ಟರ ನಲ್ಲಿ ಮರಳು ಇದ್ದ ಬಗ್ಗೆ ಹೇಳಿಲ್ಲ. ನನ್ನ ಹೇಳಿಕೆಯಲ್ಲಿ ಟ್ಯಾಕ್ಟರ ಮತ್ತು ಟ್ರೇಲರ್ ನಂಬರ ಏನು ಇತ್ತು ಎಂದು ಹೇಳಿಲ್ಲ. ಸದರಿ ಟ್ರ್ಯಾಕ್ಟರ ಯಾರ ಮಾಲಿಕತ್ವದ ಟ್ಯಾಕ್ಟರ ಎಂದು ನಾನು ಹೇಳಿಕೆಯಲ್ಲಿ ಹೇಳಿಲ್ಲ. ನನ್ನ ಮೇಲಾಧಿಕಾರಿ 1 ಬಾರಿ ಹೇಳಿಕೆ ತೆಗೆದುಕೊಂಡಿದ್ದಾರೆ.

3. ನನ್ನ ಹೇಚಳಿಕೆಯಲ್ಲಿ ನಾನು ಅರ್ಜುನ್ ರಾಠೋಡ ಗಾಡಿ ಬಿಡದೇ ಇದ್ದರೇ ನಿಮ್ಮ ಮೇಲೆ ಗಾಡಿಯನ್ನು ಹಾಯಿಸಿಕೊಂಡು ಹೋಗುತ್ತೇನೆ ಎಂದು ಹೇಳಿದ್ದಾ ಎಂದು ನನ್ನ ಹೇಳಿಕೆಯಲ್ಲಿ ಬರೆಸಿದ್ದೇನೆ. ಆ ರೀತಿ ಯಾವುದೇ ಹೇಳಿಕೆಯನ್ನು ಬರೆಸಿಲ್ಲಾ ಎಂದರೆ ಸರಿಯಲ್ಲ. ಟ್ಯಾಕ್ಟರನಲ್ಲಿ ಮರಳು ತುಂಬಿಕೊಂಡು ಬಂದಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-14 ರವರು ನಾನು ಬರುವವರೆಗೆ ಗಾಡಿಯನ್ನುನಿಲ್ಲಿಸಿ ಎಂದು ಹೇಳಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆ ನಡೆದಾಗ ಚಾಸಾ-14 ರವರು ಬರಲಿಲ್ಲ. ನಾನು ಚಾಸಾ-14 ರವರಿಗೆ ಏಕೆ ಬರಲಿಲ್ಲಾ ಎಂದು ಕೇಳಲಿಲ್ಲ. ಪ್ರಕಾಶ ಅಂಬೋರೆ ಮೇಲೆ ಹಲ್ಲೆ ಮಾಡಿದ ಬಗ್ಗೆ ಪ್ರಕಾಶ ಅಂಬೋರೆ ದೂರು ಕೊಟ್ಟಿಲ್ಲ. ಘಟನೆ ನಡೆದಾಗ 15-20 ಜನರು ಕೂಡಿದ್ದರು. ಅಲ್ಲಿ ಕೂಡಿದ್ದ ಜನರ ಹೆಸರು ನನಗೆ ಗೊತ್ತಿಲ್ಲ, ಆದರೆ ಅವರನ್ನು ನಾನು ಗುರುತಿಸಬಲ್ಲೆ. ಘಟನೆ ನಡೆದಾಗ 15-20 ಜನರು ಕೂಡಿದ್ದರು, ಪರಶುರಾಮ ರಾಠೋಡ್ ಗಾಡಿಯನ್ನು ತೆಗೆದುಕೊಂಡು ಬಂದರು, ಅರ್ಜುನ ಮತ್ತು ಶಿವಪ್ಪ ಬಾಯಿ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ಅರ್ಜುನ್ ರಾಠೋಡ ಕಾಂಗ್ರೇಸ್ ಪಕ್ಷದ ಲೀಡರ್ ಎಂದರೆ ನಿಜ. ನಾನು ಮತ್ತು ಚಾಸಾ-14 ರವರು ಸೇರಿ 1 ರಿಂದ 3 ನೇ ಆರೋಪಿತರ ವಿರುದ್ಧ ಸುಳ್ಳು ದೂರು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಪರಶುರಾಮ ರಾಠೋಡ್ ಇವರ ಟ್ರ್ಯಾಕ್ಟರ ಲೈಸನ್ಸ ಇದ್ದ ಬಗ್ಗೆ ದಾಖಕಲೆಗಳನ್ನು ಕೇಳಲಿಲ್ಲ, ಆದರೆ ಮರುಳು ತುಂಬಿದ ಬಗ್ಗೆ ದಾಖಲೆಗಳನ್ನು ಕೇಳಿದೆ. ಪರಶುರಾಮ ರಾಠೋಡ್ ಇವರಿಗೆ ಟ್ರ್ಯಾಕ್ಟರ ಓಡಿಸಲು ಬರುವುದಿಲ್ಲ, ಆತನ ಬಳಿ ಲೈಸನ್ಸಇರುವುದಿಲ್ಲಾ ಹಾಗೂ ಆತನ ಮೇಲೆ ಸುಳ್ಳು ಕೇಸ್ ಮಾಡಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**
ಪ್ರಧಾನ ಸಿವಿಲ್ ಹಾಗೂ ಜೆ .ಎಮ್ .ಎಫ್.ಸಿ
ನ್ಯಾಯಾಧೀಶರು ರೋಣ .